# ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ಅರಕಲಗೂಡು

**ಸಿ.ಸಿ.ನಂಃ665/2019**

ದಿನಾಂಕಃ **23/01/2020**

ಫಿರ್ಯಾದಿ :- ಆರಕ್ಷಕ ಉಪ-ನಿರೀಕ್ಷಕರು,
ಅರಕಲಗೂಡು ಪೊಲೀಸ್ ಠಾಣೆ,
ಅರಕಲಗೂಡು

ವಿರುದ್ಧ

ಆರೋಪಿಗಳು :- ಅಣ್ಣಯ್ಯ ಬಿನ್ ಲೇಟ್ ಹುಚ್ಚಯ್ಯ ಮತ್ತು ಇತರರು

**:: ದೋಷಾರೋಪಣೆ ::**

ಶ್ರೀ.ಯೋಗೇಶ್, ಎಂ.ಎ. ಎಲ್.ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಕಲಗೂಡು ಆದ ನಾನು,

ಆರೋಪಿತರು : 1. ಅಣ್ಣಯ್ಯ ಬಿನ್ ಲೇಟ್ ಹುಚ್ಚಯ್ಯ
55 ವರ್ಷ,

2. ಲಕ್ಷ್ಮಮ್ಮ ಕೋಂ ಅಣ್ಣಯ್ಯ ,
48 ವರ್ಷ,
ಇಬ್ಬರ ವಾಸಃ ಮುತ್ತಿಗೆ ಗ್ರಾಮ,
ಕಸಬಾ ಹೋಬಳಿ,
ಅರಕಲಗೂಡು ತಾಲ್ಲೂಕು

ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕಃ 18/05/2018 ರಂದು ಮಧ್ಯಾಹ್ನ ಸುಮಾರು 12-30 ಗಂಟೆ ಸಮಯದಲ್ಲಿ ಅರಕಲಗೂಡು ಪೊಲೀಸ್ ಠಾಣಾ ಸರಹದ್ದಿನ ಮುತ್ತಿಗೆ ಗ್ರಾಮದ ಚಾಸಾ-1 ರವರ ತಮ್ಮ ಅನುಭವದಲ್ಲಿರುವ ಜಮೀನಿನಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಟ್ರಾಕ್ಟರ್ ನಲ್ಲಿ ಉಳುಮೆ ಮಾಡಿಸುತ್ತಿರುವಾಗ ಚಾಸಾ-1 ರವರು ಹೋಗಿ 1 ಮತ್ತು 2 ನೇ ಆರೋಪಿರಿಗೆ ಜಮೀನನ್ನು ಏಕೆ ಉಳುಮೆ ಮಾಡಿಸುತ್ತಿದ್ದೀರಾ ಎಂದ ಕೇಳಲು ಹೋದಾಗ ಆರೋಪಿತರಾದ ನೀವುಗಳು ಚಾಸಾ-1 ರವರಿಗೆ ಕೈಯಿಂದ ಮುಖಕ್ಕೆ, ಮೈ-ಕೈಗೆ ಹೊಡೆದು ಸಾಮಾನ್ಯ

ಸ್ವರೂಪದ ನೋವುಂಟುಪಡಿಸಿ ಭಾ.ದಂ.ಸಂ.ಕಲಂ323 ಸಹವಾಚಕ ಕಲಂ34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿಗಳಾದ ನೀವುಗಳು ಅಪರಾಧವೆಸಗುವ ಸಮಾನ ಉದ್ದೇಶದಿಂದ 1 ನೇ ಮತ್ತು 2 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಅಪಮಾನವಾಗುವ ರೀತಿಯಲ್ಲಿ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯಪಡಿಸಿ ಭಾ.ದಂ.ಸಂ.ಕಲಂ354 ಸಹವಾಚಕ ಕಲಂ34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವುಗಳು ಅಪರಾಧವೆಸಗುವ ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ಅಲ್ಲಿಯೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಚಾಸಾ-1 ರವರ ಹಲ್ಲಿಗೆ ಹೊಡೆದು ಚಾಸಾ-1 ರವರ ಕೆಳಭಾಗದ ಎರಡು ಹಲ್ಲುಗಳು ಮುರಿದು ಬಿದ್ದು ತೀವ್ರ ಸ್ವರೂಪದ ನೋವುಂಟುಪಡಿಸಿ ಭಾ.ದಂ.ಸಂ.ಕಲಂ326 ಸಹವಾಚಕ ಕಲಂ34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನನ್ನ ಸಮಕ್ಷಮದಲ್ಲಿ ಪಡೆದುಕೊಳ್ಳಲಾಯಿತು.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಅರಕಲಗೂಡು